ಇಸ್ಲಾಮೀ ಸಂಸ್ಕೃತಿಯ ಶೈಕ್ಷಣಿಕ ಮಗ್ಗುಲು

ಅಲ್ಲಾಹನು ಮೊತ್ತಮೊದಲು ಅವತೀರ್ಣಗೊಳಿಸಿದ ಕುರ್‌ಆನ್ ವಚನಗಳು ಶಿಕ್ಷಣದ ಮಹತ್ವ ಮತ್ತು ಶ್ರೇಷ್ಠತೆಗೆ ಸಾಕ್ಷಿಯಾಗಿವೆ. ಅಲ್ಲಾಹ್ ಹೇಳುತ್ತಾನೆ,

﴿ٱقۡرَأۡ بِٱسۡمِ رَبِّكَ ٱلَّذِي خَلَقَ ۝١ خَلَقَ ٱلۡإِنسَٰنَ مِنۡ عَلَقٍ ۝٢ ٱقۡرَأۡ وَرَبُّكَ ٱلۡأَكۡرَمُ ۝٣ ٱلَّذِي عَلَّمَ بِٱلۡقَلَمِ ۝٤ عَلَّمَ ٱلۡإِنسَٰنَ مَا لَمۡ يَعۡلَمۡ ۝٥﴾ العلق: ١ - ٥

"(ಸಂದೇಶವಾಹಕರೇ) ಓದಿರಿ, ನಿಮ್ಮನ್ನು ಸೃಷ್ಟಿಸಿದ ನಿಮ್ಮ ಪ್ರಭುವಿನ ನಾಮದೊಂದಿಗೆ. ಅವನು ಹೆಪ್ಪುಗಟ್ಟಿದ ರಕ್ತದ ಒಂದು ಪಿಂಡದಿಂದ ಮಾನವನನ್ನು ಸೃಷ್ಟಿಸಿದನು. ಓದಿರಿ, ಮತ್ತು ನಿಮ್ಮ ಪ್ರಭು ಮಹಾ ಉದಾರಿ. ಅವನು ಲೇಖನಿಯ ಮೂಲಕ ವಿದ್ಯೆ ಕಲಿಸಿದನು. ಮಾನವನು ತಿಳಿದಿಲ್ಲದಂತಹ ಜ್ಞಾನವನ್ನು ಅವನಿಗೆ ದಯಪಾಲಿಸಿದನು." (ಪವಿತ್ರ ಕುರ್‌ಆನ್: 96: 1–5)

ಅದೇ ರೀತಿ ಅಲ್ಲಾಹನು ಜ್ಞಾನವಂತರ ಸ್ಥಾನಮಾನವನ್ನು ಉನ್ನತೀಕರಿಸಿದ್ದಾನೆ. ಅಲ್ಲಾಹ್ ಹೇಳುತ್ತಾನೆ,

﴿يَرۡفَعِ ٱللَّهُ ٱلَّذِينَ ءَامَنُواْ مِنكُمۡ وَٱلَّذِينَ أُوتُواْ ٱلۡعِلۡمَ دَرَجَٰتٖۚ ۝١١﴾ المجادلة: ١١

"ನಿಮ್ಮ ಪೈಕಿ ಸತ್ಯವಿಶ್ವಾಸವುಳ್ಳವರಿಗೆ ಮತ್ತು ಜ್ಞಾನವು ನೀಡಲ್ಪಟ್ಟವರಿಗೆ ಅಲ್ಲಾಹನು ಉನ್ನತ ಪದವಿಗಳನ್ನು ದಯಪಾಲಿಸುವನು." (ಪವಿತ್ರ ಕುರ್‌ಆನ್: 58: 11)

ಅಲ್ಲಾಹನ ಸಂದೇಶವಾಹಕರು(ಸ) ವಿದ್ಯಾರ್ಜನೆಗೆ ಪಡುವ ಪ್ರಯತ್ನವನ್ನು ಈ ರೀತಿ ಬಣ್ಣಿಸಿದ್ದಾರೆ,

«مَنْ سَلَكَ طَرِيقًا يَلْتَمِسُ فِيهِ عِلْمًا سَهَّلَ اللَّهُ لَهُ طَرِيقًا إِلَى الجَنَّةِ» (بخاری ، ابوداود ، ترمذی و ابن ماجه)

"ಒಬ್ಬನು ವಿದ್ಯಾರ್ಜನೆಗಾಗಿ ಯಾವುದಾದರೂ ದಾರಿಯಲ್ಲಿ ನಡೆಯುತ್ತಿದ್ದರೆ, ಅಲ್ಲಾಹನು ತನ್ನ ಅನುಗ್ರಹದಿಂದ ಅವನಿಗಾಗಿ ಸ್ವರ್ಗದ ದಾರಿಯನ್ನು ಸುಗಮಗೊಳಿಸುತ್ತಾನೆ." (ಬುಖಾರಿ, ಅಬೂದಾವೂದ್, ತಿರ್ಮಿದಿ, ಇಬ್ನುಮಾಜಃ)

ಪ್ರವಾದಿವರ್ಯರು(ಸ) ಮುಂದುವರಿದು ಹೇಳುತ್ತಾರೆ,

«طلبُ العِلْمِ فريضَةٌ على كُلِّ مُسْلِمٍ» (ابن ماجه)

"ವಿದ್ಯೆ ಗಳಿಸುವುದು ಪ್ರತಿಯೋರ್ವ ಮುಸ್ಲಿಮನ ಕರ್ತವ್ಯವಾಗಿದೆ." (ಇಬ್ನುಮಾಜಃ)

ಬದ್ರ್ ಯುದ್ಧದಲ್ಲಿ ಕೈದಿಗಳಾಗಿ ಬಂದ ಮುಶ್ರಿಕರನ್ನು ಬಂಧಮುಕ್ತಗೊಳಿಸಲು, ಪ್ರವಾದಿವರ್ಯರು(ಸ) ಪ್ರತಿಯೊಬ್ಬ ಕೈದಿಯೂ ಹತ್ತು ಮಂದಿ ಸಹಾಬಿಗಳಿಗೆ ಓದಲು ಮತ್ತು ಬರೆಯಲು ಕಲಿಸಬೇಕೆಂಬ ಶರ್ತ ವಿಧಿಸಿದರು. ಮುಸ್ಲಿಮರು ಪ್ರತಿಯೊಂದು ಕಾಲಘಟ್ಟದಲ್ಲೂ ವಿದ್ಯೆ ಮತ್ತು ಜ್ಞಾನದ ವ್ಯವಸ್ಥೆಯನ್ನು ಮಾಡಿದ್ದರು. ಆದ್ದರಿಂದಲೇ ಅವರು ನಮಗಾಗಿ ಒಂದು ಉನ್ನತವಾದ ಸಾಂಸ್ಕೃತಿಕ ಬಂಡವಾಳವನ್ನು ಬಿಟ್ಟು ಹೋದರು. ಅದರಿಂದ ಸಂಸ್ಕೃತಿಯ ಎಲ್ಲ ರಂಗದಲ್ಲಿಯೂ ಜ್ಞಾನದ ಶ್ರೇಷ್ಠತೆ ಮತ್ತು ಮಹತ್ವವು ನಮಗೆ ಕಾಣುತ್ತದೆ. ಇಸ್ಲಾಮ್ ಜ್ಞಾನ ಗಳಿಕೆಗೆ ಕೆಲವು ಮಾಧ್ಯಮಗಳನ್ನು ತೋರಿಸಿದೆ. ಅವುಗಳ ಪೈಕಿ ಕೆಲವು ಈ ಪ್ರಕಾರ ಇವೆ–

ಮಸೀದಿಗಳು

ಮುಸ್ಲಿಮರ ಪಾಲಿಗೆ ವಿದ್ಯೆ ಮತ್ತು ಜ್ಞಾನದ ಕಂದೀಲನ್ನು ಬೆಳಗಿಸಿದ ಮೊದಲ ಪಾಠಶಾಲೆ ಮಸೀದಿಯಾಗಿತ್ತು. ಅಲ್ಲಾಹನ ಸಂದೇಶವಾಹಕರು(ಸ) ಮದೀನಕ್ಕೆ ವಲಸೆ ಹೋದಾಗ ಮೊತ್ತ ಮೊದಲು ನಿರ್ಮಿಸಿದ್ದು ಮಸೀದಿಯನ್ನಾಗಿತ್ತು. ಇದರಿಂದ ಮುಸ್ಲಿಮರ ಜೀವನದಲ್ಲಿ ಮಸೀದಿಯ ಮಹತ್ವವನ್ನು ಅಂದಾಜಿಸಬಹುದಾಗಿದೆ. ಸಂಸ್ಕೃತಿಯ ನಿರ್ಮಾಣ ಮತ್ತು ಅದನ್ನು ಉನ್ನತಿಗೇರಿಸಲು ಸಹಕಾರಿಯಾದ ಮೊದಲ ಹಂತವು ಮಸೀದಿಯಾಗಿತ್ತು ಎಂಬುದನ್ನು ಮುಸ್ಲಿಮರು ತಿಳಿದಿರಬೇಕು. ಮಸೀದಿಯು ಮುಸ್ಲಿಮರ ಸಭಾಂಗಣವೂ ಆಗಿತ್ತು. ಅವರು ಮಸೀದಿಯಲ್ಲಿ ಒಟ್ಟು ಸೇರುತ್ತಿದ್ದರು ಮತ್ತು ಧಾರ್ಮಿಕ ಹಾಗೂ ಲೌಕಿಕವಾದ ವ್ಯವಹಾರಗಳಲ್ಲಿ ಅಭಿಪ್ರಾಯ ವಿನಿಮಯ ಮಾಡುತ್ತಿದ್ದರು. ಮಸೀದಿಯಲ್ಲಿ ದಿಕ್ರ್ ಮತ್ತು ಚಿಂತನೆಯ ಸಭೆಯು ನಡೆಯುತ್ತಿತ್ತು. ಸಣ್ಣ-ದೊಡ್ಡ ಎಲ್ಲ ಮುಸ್ಲಿಮರೂ ಮಸೀದಿಯಲ್ಲಿ ಕುರ್‌ಆನಿನ ಶಿಕ್ಷಣ ಮತ್ತು ಧಾರ್ಮಿಕ ವ್ಯವಹಾರಗಳನ್ನು ಕಲಿಯುತ್ತಿದ್ದರು.

ಇಸ್ಲಾಮೀ ಸಂಸ್ಕೃತಿಯ ನಿರ್ಮಾಣ ಮತ್ತು ಪ್ರಗತಿಯಲ್ಲಿ ಪ್ರಧಾನ ಪಾತ್ರ ವಹಿಸಿದ ಮಸೀದಿಗಳು ಈ ಪ್ರಕಾರ ಇವೆ: ಮಕ್ಕಾದ ಮಸ್ಜಿದುಲ್ ಹರಾಮ್, ಮದೀನದ ಮಸ್ಜಿದುನ್ನಬವಿ, ಫಲಸ್ತೀನಿನ ಮಸ್ಜಿದುಲ್ ಅಕ್ಸಾ, ಡಮಾಸ್ಕಸ್‌ನ ಮಸ್ಜಿದ್ ಅಮವಿ, ಈಜಿಪ್ತಿನ ಮಸ್ಜಿದ್ ಅಮ್ರ್ ಬಿನ್ ಆಸ್ ಮತ್ತು ಮಸ್ಜಿದ್ ಅಝ್ಹರ್, ಟ್ಯುನೀಶಿಯದ ಮಸ್ಜಿದ್ ಕೈರ್‌ವಾನ್; ಅಂತೆಯೇ ಇಸ್ಲಾಮಿನ ಸೇವೆಗೈದಿರುವ, ಮುಸ್ಲಿಮರ ಸಾಂಸ್ಕೃತಿಕ ವೈಭವವನ್ನು ಉನ್ನತೀಕರಿಸಿದ ಮತ್ತು ಮುಸ್ಲಿಮರ ಹಲವು ಪೀಳಿಗೆಗಳಿಗೆ ತರಬೇತಿ ನೀಡಿದ ಇನ್ನೂ ಹಲವಾರು ಮಸೀದಿಗಳಿವೆ. ಒಟ್ಟಿನಲ್ಲಿ ಸಂಸ್ಕೃತಿಯ ನಿರ್ಮಾಣ ಮತ್ತು ಪ್ರಗತಿಯಲ್ಲಿ ಮಸೀದಿಗಳ ಪಾತ್ರ ಎಷ್ಟು ಹಿರಿದಾದುದು ಎಂದು ಈ ಮೂಲಕ ತಿಳಿದು ಬರುತ್ತದೆ.

ಪಾಠಶಾಲೆಗಳು

ಇಲ್ಲಿ ಓದು, ಬರವಣಿಗೆ ಮತ್ತು ಕುರ್‌ಆನಿನ ಶಿಕ್ಷಣದ ವ್ಯವಸ್ಥೆಯನ್ನು ಮಾಡಲಾಗುತ್ತದೆ. ಪಾಠಶಾಲೆಗಳಲ್ಲಿ ಕುರ್‌ಆನ್ ಶಿಕ್ಷಣದಲ್ಲಿ ತಜ್ಞರಾದ ಅಧ್ಯಾಪಕರ ಒಂದು ತಂಡವಿರುತ್ತದೆ. ಆ ತಂಡವು ಮಕ್ಕಳ ಶಿಕ್ಷಣ-ತರಬೇತಿಯ ಹೊಣೆಗಾರಿಕೆಯನ್ನು ವಹಿಸುತ್ತದೆ. ಜನರ ಸಂಖ್ಯೆಯು ಹೆಚ್ಚಾದಾಗ ಮತ್ತು ಮಸೀದಿಗಳಲ್ಲಿ ಸ್ಥಳಾವಕಾಶವು ಕಡಿಮೆಯಾದಾಗ, ಪಾಠಶಾಲೆಗಳು ಶೈಕ್ಷಣಿಕ ಚಟುವಟಿಕೆಗಳ ವ್ಯವಸ್ಥೆಯ ನಿಟ್ಟಿನಲ್ಲಿ ಮೊದಲ ಹಂತವಾಗಿ ಮಾರ್ಪಟ್ಟಿತು. ಈ ಪಾಠಶಾಲೆಗಳು ಎಲ್ಲ ಮುಸ್ಲಿಮ್ ರಾಷ್ಟ್ರಗಳಿಗೂ ಹರಡಿದುವು. ಇದರಿಂದ ಶೈಕ್ಷಣಿಕ ಪ್ರಗತಿಯು ಸಾಧ್ಯವಾಯಿತು.

ಗ್ರಂಥಾಲಯಗಳು

ಮುಸ್ಲಿಮ್ ಆಡಳಿತಗಾರರು ವಿವಿಧ ವಿದ್ಯೆ-ಕಲೆಗಳಲ್ಲಿ ಪ್ರಯೋಜನಕಾರಿಯಾದ ಗ್ರಂಥಗಳಿಂದ ತುಂಬಿದ ಹಲವು ಗ್ರಂಥಾಲಯಗಳನ್ನು ಸ್ಥಾಪಿಸಿದರು. ಬಗ್ದಾದ್, ಡಮಾಸ್ಕಸ್ ಮತ್ತು ಕೈರೋಗಳು ಇಂತಹ ಗ್ರಂಥಾಲಯಗಳಿಂದಲೇ ಪ್ರಸಿದ್ಧಿಗೆ ಬಂದಿದ್ದುವು. ಅಲ್ಲಿ ಇಸ್ಲಾಮೀ ಜ್ಞಾನ-ಕಲೆಗಳಿಗೆ ಸಂಬಂಧಿಸಿದ ಎಲ್ಲ ತರದ ವಿಭಿನ್ನ ಶೈಲಿಯ ಗ್ರಂಥಗಳು ತುಂಬಿದ್ದುವು. ಈ ಗ್ರಂಥಾಲಯಗಳಲ್ಲಿ ಅತಿ ಹೆಚ್ಚು ಪ್ರಸಿದ್ಧಿಗೆ ಬಂದಿದ್ದು, ಫಾತಿಮೀ ಕಾಲದಲ್ಲಿ ಹಾಕಿಮ್ ಅಮ್ರುಲ್ಲಾ ಹಿಜರಿ 395ರಲ್ಲಿ ಸ್ಥಾಪಿಸಿದ 'ದಾರೆ ಹಿಕ್ಮತ್' ಗ್ರಂಥಾಲಯವಾಗಿತ್ತು. ಇದರಲ್ಲಿ ಅನೇಕಾರು ಗ್ರಂಥಗಳನ್ನು ಇರಿಸಲಾಗಿತ್ತು. ಅಲ್ಲಿ ಹಲವಾರು ಕೋಣೆಗಳಿದ್ದುವು. ಕೆಲವದರಲ್ಲಿ ತರಗತಿಗಳು ನಡೆಯುತ್ತಿದ್ದುವು ಮತ್ತು ಕೆಲವು ಅಧ್ಯಯನಗಳಿಗೆ ಮೀಸಲಾಗಿದ್ದುವು. ಅದರಲ್ಲಿ ಹಲವು ರೀತಿಯ ಅಲಂಕಾರವನ್ನು ಮಾಡಲಾಗಿತ್ತು. ವಿದ್ಯಾರ್ಥಿಗಳ ಸೇವೆಗೆ ನೌಕರರಿದ್ದರು. ವಿದ್ಯಾರ್ಥಿಗಳು ಪುಸ್ತಕಗಳನ್ನು ಸುಲಭದಲ್ಲಿ ಗಳಿಸಲಿಕ್ಕಾಗಿ

www.ibnfaizi.com

ಪುಸ್ತಕಗಳ ಪಟ್ಟಿಯೂ ಇತ್ತು. ಇದರಲ್ಲಿ ಪುಸ್ತಕಗಳನ್ನು ಸಾಲವಾಗಿ ಕೊಂಡು ಹೋಗುವ ವ್ಯವಸ್ಥೆಯೂ ಇತ್ತು.

ಮದ್ರಸಗಳು

ಮದ್ರಸಗಳ ಸಂಖ್ಯೆಯು ಅನೇಕವಿತ್ತು. ಅವುಗಳ ಪೈಕಿ ಕೆಲವು ಮದ್ರಸಗಳು ಆಡಳಿತಗಾರರು ಮತ್ತು ಅವರ ಸಂತಾನಕ್ಕೆ ಮೀಸಲಾಗಿದ್ದುವು. ಅದರಲ್ಲಿ ಅವರು ನಾಯಕತ್ವ ಮತ್ತು ಹೊಣೆಗಾರಿಕೆಯನ್ನು ವಹಿಸಲು ಕಲಿಸಲಾಗುತ್ತಿತ್ತು. ಕೆಲವು ಮದ್ರಸಗಳು ಸಾಮಾನ್ಯವಾಗಿದ್ದುವು. ಅದರಲ್ಲಿ ಮುಸ್ಲಿಮ್ ಮಕ್ಕಳ ವಿದ್ಯೆ ಮತ್ತು ಕಲೆಗಳ ವಿವಿಧ ಪ್ರಕಾರಗಳ ಶಿಕ್ಷಣ ನೀಡಲಾಗುತ್ತಿತ್ತು.

ವಿವಿಧ ಆಡಳಿತಗಾರರು ತಂತಮ್ಮ ಕಾಲದಲ್ಲಿ ದೊಡ್ಡ ವೈಭವಯುತ ಮದ್ರಸಗಳನ್ನು ನಿರ್ಮಿಸಿದ್ದರು. ಬಗ್ದಾದ್, ಅಸ್ಫಹಾನ್, ಈಜಿಪ್ಟ್ ಮತ್ತು ಮೊಸುಲ್ ಇತ್ಯಾದಿ ಕಡೆಗಳಲ್ಲಿ ಇಂತಹ ಮದ್ರಸಗಳನ್ನು ನಿರ್ಮಿಸಲಾಗಿತ್ತು. ನೂರುದ್ದೀನ್ ಝಂಗೀಯು ಡಮಾಸ್ಕಸ್ ಸಮೀಪ ನಿರ್ಮಿಸಿದ ಮದ್ರಸವು ಎಲ್ಲಕ್ಕಿಂತ ಹೆಚ್ಚು ಪ್ರಸಿದ್ಧವಾಗಿತ್ತು. ಇದು 'ಮದ್ರಸಾ ನೂರಿಯಾ' ಎಂಬ ಹೆಸರಲ್ಲಿ ಗುರುತಿಸಲ್ಪಡುತ್ತಿತ್ತು. ಇದನ್ನು ಹಿಜರಿ 563ರಲ್ಲಿ ನಿರ್ಮಿಸಲಾಗಿತ್ತು. ಇದರ ವಿಸ್ತೀರ್ಣವು ಬಹಳ ವಿಸ್ತಾರವಾಗಿತ್ತು. ಅನೇಕ ತರಗತಿ ಕೋಣೆಗಳಿದ್ದುವು. ಮಸೀದಿಯಿತ್ತು. ಅಧ್ಯಾಪಕರ ಕೋಣೆಗಳಿದ್ದುವು. ಮದ್ರಸದ ಸೇವಕರ ವಿಶ್ರಾಂತಿ ಗೃಹಗಳಿದ್ದುವು. ಸ್ನಾನದ ಕೋಣೆ ಮತ್ತು ಪಾಯಿಖಾನೆಗಳಿದ್ದುವು. ಬಹಳ ಚಿತ್ತಾಕರ್ಷಕ ಕಟ್ಟಡ ಮತ್ತು ಸುಂದರ ವಿನ್ಯಾಸವು ಅದರ ಪ್ರತ್ಯೇಕವಾದ ಹೆಗ್ಗುರುತಾಗಿತ್ತು. ಅದರ ನಿರ್ಮಾಣ ಕಲೆಯು ಬಹಳ ಉನ್ನತವಾದುದಾಗಿತ್ತು.

ಈ ಮದ್ರಸಗಳು ದೊಡ್ಡ ದೊಡ್ಡ ವಿದ್ವಾಂಸರನ್ನು ಹುಟ್ಟಿಸಿವೆ. ಮಕ್ಕಳ ಪ್ರತಿಭೆ ಮತ್ತು ಸಾಮರ್ಥ್ಯವನ್ನು ಅರಿಯಲು ಅಧಿಕೃತ ಪರೀಕ್ಷೆಗಳೂ ನಡೆಯುತ್ತಿದ್ದುವು. ಮಕ್ಕಳ ಪ್ರತಿಭೆ ಮತ್ತು ಸಾಮರ್ಥ್ಯಕ್ಕೆ ತಕ್ಕಂತೆ ಅವರಿಗೆ ಮಾರ್ಗದರ್ಶನ ನೀಡಲಾಗುತ್ತಿತ್ತು. ಅಧ್ಯಾಪಕರು ಮತ್ತು ವಿದ್ಯಾರ್ಥಿಗಳ ನಡುವೆ ಗಾಢ ಸಂಬಂಧವಿತ್ತು. ವಿದ್ಯಾರ್ಥಿಗಳಿಗೆ ವಿಶೇಷತಃ ಆಯ್ದ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ನೀಡುವ ನಿಟ್ಟಿನಲ್ಲಿ ವಿದ್ಯಾರ್ಥಿ ವೇತನ ಮತ್ತಿತರ ಸವಲತ್ತುಗಳನ್ನು ನೀಡಲಾಗುತ್ತಿತ್ತು. ಆಟೋಟಗಳ ವ್ಯವಸ್ಥೆಯಿತ್ತು. ವಿಹಾರದ ಅವಕಾಶವೂ ಇತ್ತು. ವಿವಿಧ ಸ್ಥಳಗಳಿಗೆ ಪ್ರವಾಸ ಕಾರ್ಯಕ್ರಮಗಳನ್ನಿಡಲಾಗುತ್ತಿತ್ತು. ಮಕ್ಕಳ ದೈಹಿಕ ಮತ್ತು ಬೌದ್ಧಿಕ ಬೆಳವಣಿಗೆಗೆ ವಿಶೇಷ ವ್ಯವಸ್ಥೆಯಿತ್ತು. ಅದರ ಜತೆಗೇ ಹೆಣ್ಮಕ್ಕಳ ಶಿಕ್ಷಣದ ವ್ಯವಸ್ಥೆಯೂ ಇತ್ತು. ವಿದ್ಯಾರ್ಥಿ/ವಿದ್ಯಾರ್ಥಿನಿಯರಿಗೆ ಸಮಾನವಾದ ಶಿಕ್ಷಣವನ್ನು ನೀಡಲಾಗುತ್ತಿತ್ತು.

* * * * *

www.ujirfalahi.com